ಶ್ರೀ ಎಚ್. ಡಿ. ದೇವೇಗೌಡ.—ಎಷ್ಟು ಹಣ ಎಂದು ಕೇಳಿ ? ಇದಕ್ಕೆ ಬೇರೆ ಒಂದು ಪ್ರಶ್ನೆಯನ್ನು ಕೇಳಬೇಕು. ಎಲ್ಲಿ ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಕೆಲಸ ತೆಗೆದುಕೊಂಡಿದ್ದೇವೆ ಎಂದು ಕೇಳಿದರೆ, ಆದಕ್ಕೆ ಉತ್ತರ ಕಳುಹಿಸಿ ಕೊಡುತ್ತೇನೆ. ಈಗಲೇ ಬೇಕು ಎಂದರೆ, ಈಗ ಕೊಡಲಿಕ್ಕೆ ಸಾಧ್ಯವಿಲ್ಲ. ಆಮೇಲೆ ಬೇಕಾದರೆ ಕೊಡುತ್ತೇನೆ.

ಸಂಡೂರು ಕ್ಷೇತ್ರದಲ್ಲಿ ರಸ್ತೆಗಳ ನಿರ್ಮಾಣ

೭೮. **ಶ್ರೀ ಯು. ಭೂಪತಿ(ಸಂಡೂರು).**—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಡೂರು ಕ್ಷೇತ್ರದಲ್ಲಿ ರಸ್ತೆಗಳ ನಿರ್ಮಾಣದ ಅವಶ್ಯಕತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ರಸ್ತೆ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಈ ಬಗ್ಗೆ ಮಂಜೂರಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ರಸ್ತೆಗಳ ನಿರ್ಮಾಣ ಕಾರ್ಯವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನಗಳಿಗೆ ಅನುಗುಣವಾಗಿ ಮಾಡಲಾಗುತ್ತಿದೆ.

೮೪-೮೫ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ಮಾಣ ಕಾರ್ಯಗಳಿಗೋಸ್ಕರ ಲೋಕೋಪಯೋಪಯೋಗಿ ಇಲಾಖೆಯ ಆಯವ್ಯಯದ ಪಟ್ಟಿಯಲ್ಲಿ ೪೨.೫೫ ಲಕ್ಷ ರೂಪಾಯಿಗಳ ಅಂದಾಜು ಮೊಬಲಗಿನ ೧೧ ಕೆಲಸಗಳು ಸೇರಿದ್ದು, ೮ ಲಕ್ಷ ೭೩ ಸಾವಿರ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾನು ಏತಕ್ಕೆ ಕೇಳಂತ್ತಿದ್ದೇನೆ ಎಂದರೆ, ನಮ್ಮ ಸಂಡೂರು ಕ್ಷೇತ್ರದಲ್ಲಿ ಸುಮಾರು ೬೦ ಭಾಗದಷ್ಟು ಸ್ಥಳಗಳಲ್ಲಿ ರಸ್ತೆಗಳ ನಿರ್ಮಾಣ ಆಗಿಲ್ಲ. ಬಸ್ಸುಗಳ ಮತ್ತು ಸಾರಿಗೆ ವ್ಯವಸ್ಥೆ ಇಲ್ಲವಾಗಿದೆ. ಬಸ್ಸುಗಳ ಬಗ್ಗೆ ಕೆ. ಎಸ್. ಆರ್. ಟಿ. ಸಿ. ಯವರಿಗೆ ಕೇಳಿದರೆ ಅವರು ರಸ್ತೆಗಳು ಇಲ್ಲ, ಅಲ್ಲಿ ಬಸ್ಸುಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಭಾಗಗಳಲ್ಲಿ ಸಾರಿಗೆ ವ್ಯವಸ್ಥೆಗಾಗಿ ಶೀಘ್ರವಾಗಿ ಅನುಕೂಲ ಕಲ್ಪಿಸಿ ಕೊಡಬೇಕು. ಇಲ್ಲಿಯ ಇಂಜಿನೀಯರ್‌ಗಳು ಮಾಡಿದ ಎಸ್ಟಿಮೇಟ್ ಕೂಡಾ ಕಾರ್ಯಗತವಾಗದೇ ಅಲ್ಲಿಯೇ ಇರುತ್ತವೆ. ಇದರ ಬಗ್ಗೆ ಗಮನ ಹರಿಸುವಿರಾಗಿ ನಂಬಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಸದಸ್ಯರು ಸ್ವಲ್ಪ ಸಹಕಾರ ಕೊಟ್ಟರೆ ನಾನು ನೋಡಿ ಕೊಳ್ಳುತ್ತೇನೆ. ಈ ಬಗ್ಗೆ ವಿವರಗಳನ್ನು ತಿಳಿದುಕೊಂಡು ಈ ವಾರದ ಕೊನೆಯಲ್ಲಿ ಹೇಳುತ್ತೇನೆ.

ಕುಂದಾಪುರ ತಾಲ್ಲೂಕು ವರಾಹಿ ನೀರಾವರಿ ಯೋಜನೆಯನ್ನು ನಿರ್ಮಿಸುವ ಬಗ್ಗೆ

೮೯. **ಶ್ರೀ ಜಿ. ಎಸ್. ಆಚಾರ್ (ಬೈಂದೂರ್).**—ಮಾನ್ಯ ಲೋಕೋಪಯೋಗಿ ಜಲಾನಯನ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ನಿರ್ಮಿಸಲಾಗುವ ವರಾಹಿ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಆ) ಯಾವ ಯಾವ ಉದ್ದೇಶಗಳಿಗಾಗಿ ಈವರೆಗೆ ಎಷ್ಟು ವೆಚ್ಚ ಆಗಿದೆ ?

ಇ) ಕಳೆದ ಎರಡು ವರ್ಷಗಳಿಂದ ಯೋಜನಾ ಕಾರ್ಯ ಸಂಪೂರ್ಣ ಸ್ಥಗಿತಗೊಳ್ಳಲು ಕಾರಣವೇನು ?

ಈ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮೊದಲನೆ ಹಂತದ ಮಾರ್ಪಾಡಿಸಿದ ಯೋಜನೆಯ ಅಂದಾಜು ೧೯೮೩–೮೪ರ ದರಪಟ್ಟಿ ಯಂತೆ ೫೨,೭೮೬ ಲಕ್ಷ ರೂಪಾಯಿಗಳು.

ಆ) ಪ್ರಾರಂಭಿಕ ಕೆಲಸಗಳು, ಸಿಬ್ಬಂದಿ ವೆಚ್ಚ ಹಾಗೂ ಯೋಜನೆಗೆ ಅಗತ್ಯವಾದ ಕ್ವಾರ್ಟರ್ಸ್, ಮತ್ತು ಕಟ್ಟಡದ ನಿರ್ಮಾಣದ ಕೆಲಸಗಳಿಗೆ ಈವರೆಗೆ ಆಗಿರುವ ವೆಚ್ಚ ಸುಮಾರು ೧೧೫ ಲಕ್ಷ ರೂಪಾಯಿಗಳು.

ಇ) ಯೋಜನೆಯ ಉದ್ದೇಶದಲ್ಲಿ ಮಾರ್ಪಾಡಾಗಿರುವುದು ಮತ್ತು ಮುಳುಗಡೆಯಾಗುವ ಹಾಗೂ ಕಟ್ಟೆಯ ಕೆಲಸಕ್ಕೆ ಅಗತ್ಯವಾದ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿ ಕೊಳ್ಳಲಾಗುವುದು.

ಈ) ಮೇಲಿನ ಕಾರಣದಿಂದ ಖಚಿತವಾದ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಕುಂದಾಪುರ ತಾಲ್ಲೂಕುಗಳಿಗೆ ಸೇರಿದ ಸುಮಾರು ೪೦ ಸಾವಿರ ಎಕರೆ ಜಮೀನಿಗೆ ನೀರು ಒದಗಿಸಿಕೊಡುವಂತಹ ಒಂದು ಬೃಹತ್ ಯೋಜನೆಯನ್ನು ಸುಮಾರು ೧೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಯೋಜನೆ ಮಾಡಲಾಗಿತ್ತು. ಈ ಯೋಜನೆ ಯಾವ ಹಂತದಲ್ಲಿ ಇದೆ ? ಎರಡನೆಯದಾಗಿ, ಹಿಂದಿನ ಸರ್ಕಾರದ ಮಾನ್ಯ ಲೋಕೋಪಯೋಗಿ ಸಚಿವರು ಬಂದು ಅಡಿಗಲ್ಲು ಹಾಕಿದ್ದಾರೆ. ಆದರೆ ಆ ಯೋಜನೆ ಇದು ವರವಿಗೂ ಪೂರ್ಣಗೊಳ್ಳದೆ ಇರುವುದಕ್ಕೆ ಕಾರಣವೇನು ? ಮತ್ತೆ ಮಾನ್ಯ ಲೋಕೋಪಯೋಗಿ ಸಚಿವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಈ ಯೋಜನೆ ಇನ್ನು ೨೦ ವರ್ಷಗಳಾದರೂ ಪೂರ್ಣವಾಗುವುದಿಲ್ಲ ವೆಂದು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿರುವುದು ನಾನು ಸಹ ಓದಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಇದರಲ್ಲಿ ಯಾವುದೇ ರಾಜಕೀಯವನ್ನು ಮಾಡದೆ ಬಡ ರೈತರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.–ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೂ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾದು ನಿಜ. ಆದರೆ ಆ ಯೋಜನೆಯ ಪ್ರಾಜೆಕ್ಟ್ ರಿಪೋರ್ಟ್‌ನ್ನೂ ಮೊದಲು ತಯಾರು ಮಾಡಿದಾಗ ಕೇವಲ ೯.೪೩ ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದರು ಮತ್ತು ಡ್ರೈ ಲ್ಯಾಂಡ್‌ಗೆ ನೀರು ಕೊಡತಕ್ಕಂಥಾದ್ದು ಏನಿದೆ ಇದು ಸುಮಾರು ೩೮ ಸಾವಿರ ಎಕರೆಗಳಿಗೆ ಮಾತ್ರ ನೀರು ಕೊಡತಕ್ಕಂಥ ರೀತಿಯಲ್ಲಿ ಇತ್ತು. ಅದಕ್ಕಾಗಿ ಮೊದಲು ಇದರ ಅಂದಾಜು ವೆಚ್ಚವನ್ನು ಸುಮಾರು ೯.೪೩ ಲಕ್ಷ ರೂಪಾಯಿಗಳಿಗೆ ಮಾಡಿದ್ದರು. ಪವರ್ ಜನರೇಟ್ ಮಾಡುವುದಕ್ಕೆ ಅಲ್ಲಿ ಆಡ್ಡಿ ಬಂದು ಸುಮಾರು ೪–೫ ಗಂಟೆಗಳ ಕಾಲ ಪೀಕ್ ಲೋಡ್ ಆಗುತ್ತಿತ್ತು. ಪವರ್ ಜನರೇಟ್ ಮಾಡಿಕೊಡು ನೀರನ್ನು ಸ್ಟಾಕ್ ಮಾಡಬೇಕು. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿ ಒಂದು ನಿರ್ಧಾರ ವನ್ನು ತೆಗೆದುಕೊಂಡಿದೆ. ಈ ಒಂದು ಹಿನ್ನೆಲೆಯಲ್ಲಿ ಮೊದಲನೆ ಸ್ಟೇಜ್‌ನಲ್ಲಿ ಸುಮಾರು ೨೦೩೬ ಅಂದರೆ ಒಂದು ಟಿ.ಎಂ.ಸಿ. ನೀರು ನೀರಾವರಿಗೆ ಕಡಿಮೆಯಾಗುವ ಸಾಧ್ಯತೆ ಇತ್ತು. ಎರಡನೆಯ ಹಂತದಲ್ಲಿ ಸುಮಾರು ೪ ಟಿ.ಎಂ.ಸಿ. ನೀರನ್ನು ಇದಕ್ಕೆ ಕೊಡಬಹುದು. ಈ ಒಂದು ಹಂತದಲ್ಲಿ ಸುಮಾರು ಎಕರೆ ಗಳಷ್ಟು ಭೂಮಿ ಮುಳುಗಡೆಯಾಗುವಂತಹ ಸಾಧ್ಯತೆ ಕೂಡ ಇದೆ. ಈ ವಿಷಯವನ್ನು ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ ಇನ್ನೂ ಪರ್ಮಿಷನ್ ಸಿಕ್ಕಿಲ್ಲ. ಮತ್ತೆ ಟೆಕ್ನಿಕಲ್ ಕಮಿಟಿಯವರು ಸಹ ಇದರ ಅಂದಾಜು ವೆಚ್ಚವನ್ನು ಪರಿಶೀಲನೆ ಮಾಡಿ ತಮ್ಮ ಅಭಿಪ್ರಾಯ ವನ್ನು ಸಹ ಸೂಚಿಸಿದ್ದಾರೆ. ಕೇಂದ್ರ ಸರ್ಕಾರದಿಂದ ನಮಗೆ ಅಪ್ಪಣೆ ದೊರಕಿದ ಕೂಡಲೆ ನಾವು ಪ್ಲಾನಿಂಗ್ ಕಮಿಷನರವರ ಜೊತೆಯಲ್ಲಿ ಮತ್ತು ಹಣಕಾಸಿನ ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಿ ಇದರ ಬಗ್ಗೆ ಅಂತಿಮವಾದ ಒಂದು ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.–ಮಾನ್ಯ ಅಧ್ಯಕ್ಷರೇ ಇದರಲ್ಲಿ ಸುಮಾರು ೧೧೫ ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದರೂ ಕೂಡ ಆ ಹಣವೆಲ್ಲಾ ಸಿಬ್ಬಂದಿ ವರ್ಗದವರಿಗೆ ಮತ್ತು ನೌಕರರ ವಸತಿ ಗೃಹಗಳಿಗೆ ಖರ್ಚಾಗುತ್ತಿದೆ. ಅಲ್ಲಿರತಕ್ಕಂಥ ಕೆಲವು ನೌಕರರನ್ನು ಕೂಡ ಸರ್ಕಾರ ವರ್ಗಾವಣೆ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ದೊಡ್ಡ ಮನಸ್ಸು

ಮಾಡಿ ಈ ಯೋಜನೆಯನ್ನು ಪೂರ್ಣಗೊಳಿಸಿಕೊಡಬೇಕು. ಈ ಒಂದು ಸಕ್ಕರೆ ಕಾರ್ಖಾನೆಗೆ ಈಗಾಗಲೇ ಸುಮಾರು ೧೦ ಕೋಟಿ ರೂಪಾಯಿಗಳನ್ನು ಇನ್ವೆಸ್ಟ್ ಮಾಡಿದ್ದಾರೆ. ಆದ್ದರಿಂದ ಈ ಕಾರ್ಖಾನೆಯನ್ನು ಉಳಿಸಿಕೊಳ್ಳಬೇಕೋ ಅಥವಾ ಬಿಡಬೇಕೋ ಎನ್ನುವ ಒಂದು ಪೇಚಿಗೆ ಸರ್ಕಾರದವರು ಸಿಕ್ಕಿಹಾಕಿಕೊಂಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಬೇಕು ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಪರ್ಮಿಷನ್ ಸಹ ಪಡೆದುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.–ಮಾನ್ಯ ಅಧ್ಯಕ್ಷರೇ ಈ ಯೋಜನೆಯನ್ನು ಕೈಬಿಡಬೇಕೆನ್ನುವುದು ಸರ್ಕಾರದ ಉದ್ದೇಶವಲ್ಲ. ಅಲ್ಲಿ ಸಕ್ಕರೆ ಕಾರ್ಖಾನೆಗೂ ಇದಕ್ಕೂ ಸಂಬಂಧವಿಲ್ಲ. ಸಕ್ಕರೆ ಕಾರ್ಖಾನೆಗೆ ಪರವಾನಿಗೆಯನ್ನು ಕೊಡುವಾಗ ಎಲ್ಲಾ ರೀತಿಯ ಕೋ-ಆರ್ಡಿನೇಷನ್ ತೆಗೆದುಕೊಂಡು ಮಂಜೂರ ಮಾಡಬೇಕು. ಆದರೆ ಅಂತಹ ಕೋ-ಆರ್ಡಿನೇಷನ್ ಅಲ್ಲಿ ಇಲ್ಲ. ನಿನ್ನೆಯ ದಿವಸ ಮಾನ್ಯ ಸದಸ್ಯನಿಯರಾದ ಮನೋರಮಮಧ್ವರಾಜ್‌ರವರು ಸಹ ಮಾತನಾಡುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಅಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವುದಕ್ಕೆ ಸರಿಯಾದ ಸಂಪನ್ಮೂಲಗಳು ಇಲ್ಲ. ಹಾಲಿ ಯೋಜನೆಗಳಿಗೆ ಹಣ ಕೊಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಶಕ್ತಿ ಇಲ್ಲವೆಂದು ನಾನು ಪದೇ ಪದೇ ಈ ಸದನದಲ್ಲಿ ಹೇಳುತ್ತಾ ಬಂದಿದ್ದೇನೆ. ಅಲ್ಲಿ ಮುಳುಗಡೆಯಾಗತಕ್ಕಂಥ ಜಮೀನು ಕೂಡ ಇರುವುದರಿಂದ ನಾವು ಕೇಂದ್ರ ಸರ್ಕಾರದ ಪರ್ಮಿಷನ್ ಸಹ ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಆ ಯೋಜನೆ ಇನ್ನೂ ಹತ್ತಾರು ವರ್ಷಗಳಾದರೂ ಪೂರ್ತಿಗೊಳಿಸುವುದಕ್ಕೆ ಆಗಬಹುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.–ವರಾಹಿ ಯೋಜನೆಯಲ್ಲಿ ಮುಳುಗಡೆಯಾದಷ್ಟು ಜಮೀನು ಇಲ್ಲಿ ಮುಳುಗಡೆಯಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.–ಮಾನ್ಯ ಅಧ್ಯಕ್ಷರೇ ನಾನೇ ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಆ ಯೋಜನೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಆಸಕ್ತಿ ಇದೆ. ಆದರೆ ನಮಗೆ ಸರಿಯಾದ ಸಂಪನ್ಮೂಲಗಳು ಇಲ್ಲದಿದ್ದರೆ ನಾವು ಏನೂ ಮಾಡುವುದಕ್ಕೆ ಆಗುತ್ತದೆ? ಮತ್ತು ಮೊದಲು ಕೊಟ್ಟಂತಹ ಅಂದಾಜು ಕೂಡ ಸರಿಯಾಗಿ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆ ಆದರೆ ಸಂಪನ್ಮೂಲಗಳ ಕೊರತೆ ಇರುವುದರಿಂದ ಈ ಯೋಜನೆಯನ್ನು ಸಧ್ಯದಲ್ಲಿ ಕೈಗೆತ್ತಿಕೊಳ್ಳುವುದಕ್ಕೆ ಆಗುವುದಿಲ್ಲ.

ಯಾದಗೀರ್ ತಾಲ್ಲೂಕಿನಲ್ಲಿ ಏತ ನೀರಾವರಿ ಕೆಲಸಗಳ ಬಗ್ಗೆ.

೧೦೦. ಶ್ರೀ ಮಲ್ಲಿಕಾರ್ಜುನಖರ್ಗೆ (ಗುರುಮಿಟ್ಕಲ್).— ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾದಗೀರ್ ತಾಲ್ಲೂಕಿನಲ್ಲಿ ಪೂರ್ಣಗೊಳಿಸಲಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಪ್ರಗತಿಯಲ್ಲಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು;

ಇ) ಈ ಯೋಜನೆಗಳ ಮೇಲೆ ಖರ್ಚಾಗಿರುವ ಹಣವೆಷ್ಟು;

ಶ್ರೀ ಹೆಚ್. ಡಿ. ದೇವೇಗೌಡ, (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಎರಡು

ಆ) ಎರಡೂ

ಇ) ೩೬.೬೩೧ ಲಕ್ಷ ರೂಪಾಯಿಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಎರಡು ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ ಮತ್ತು ಇನ್ನು ಎರಡು ನೀರಾವರಿ ಯೋಜನೆಗಳು ಪೂರ್ಣವಾಗಿಲ್ಲವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಈಗ ಎರಡು ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿರುವಾಗ ಈ ಏತ ನೀರಾವರಿ ಯೋಜನೆಯಲ್ಲಿ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಿ